ಅಪ್ಪಣೆ ಮಾಡಿರುತ್ತಾರೆ. ಸದರಿ ಗವರ್ನಮೆಂಟನವರಿಂದ ಬದಲಾಯಿಸಲ್ಪಟ್ಟ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನ 42 (b)ನೆ ರೂಲು ಈ ಕೆಳಗೆ ವಿವರಿಸುವಂತೆ ಇರುತ್ತೆ :—

"ಇಂಡಿಯಾ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿಗಳ ಆಕ್ಟ್ ಮತ್ತು ನೇಟಿವ್ ಸಂಸ್ಥಾನಗಳಲ್ಲಿ ಜಾರಿಯಲ್ಲಿರುವ ಅದೇ ಸಂಬಂಧವಾದ ಕಾನೂನು—ಇವುಗಳನ್ನನುಸರಿಸಿ ರಿಜಿಸ್ಟರು ಮಾಡಲ್ಪಡುವ ಸೊಸೈಟಿಗಳ ಸೆಕ್ರಿಟರಿಗಳು, ಖಜಾನ್ಚಿಯವರು, ಅಥವಾ ಮ್ಯಾನೇಜರುಗಳು ಹಣವನ್ನು ಡಿಪಾಜಿಟ್ ಇಡಬಹುದು."

2. ಸೊಸೈಟಿಗಳಿಗೆ ಪಬ್ಲಿಕ್ ಅಕೌಂಟನ್ನು ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕುಗಳಲ್ಲಿ ಇಡುವದರಿಂದ ಈ ಕೆಳಗೆ ನಮೂದಿಸಿರುವ ರಿಯಾಯಿತಿಗಳು ದೊರೆಯುವವು.

ಯಾವ ಸೊಸೈಟಿಯೇ ಆಗಲಿ ಯಾವಾಗಲೂ 10,000 ರೂಪಾಯಿಗೆ ಮಿಾರಿ ಡಿಪಾಜಿಟ್ಟು ಇಡಕೂಡದು, ಮತ್ತು 10,000 ರೂಪಾಯಿಗೆ ಮಿಾರಿದ ವೊಬಲಗಿಗೆ ಬಡ್ಡಿ ದೊರೆಯುವದಿಲ್ಲ. ಡಿಪಾಜಿಟ್ಟನ್ನು ವಾಪಸು ತೆಗದುಕೊಳ್ಳಬೇಕಾದರೆ ಚಾಲ್ತಿ ಡಿಪಾಜಿಟ್ಟಿನಿಂದ ಮಾಹೆಯಾನಾ 1,000 ರೂಪಾಯಿಗೆ ಮಿಾರಿ ವಾಪಸು ಅಪೇಕ್ಷಿಸಕೂಡದು. ಆದರೆ ಇದಕ್ಕಿಂತಲೂ ಜಾಸ್ತಿ ವೊಬಲಗು ವಾಪಸು ತೆಗೆಯಬೇಕಾದರೆ ಬ್ಯಾಂದು ತಿಂಗಳಿಗೆ ಮುಂಚಿತವಾಗಿಯೇ ಪೋಸ್ಟ್ ಮಾಸ್ಟರಿಗೆ ಲಿಖಿತ ಮೂಲಕ ತಿಳಿಯಪಡಿಸಿ ಆ ರೀತಿ ತೆಗದುಕೊಳ್ಳಬಹುದು. ಎರಡು ಮೂರು ಸಲ ಕಿತ್ತಾವಾರಾಗಿ ಹಣವನ್ನಪೇಕ್ಷಿಸುವ ಪಕ್ಷದಲ್ಲಿ ಎಷ್ಟುಕಿತ್ತಾ ಎಂಬುವದನ್ನೂ, ಯಾವ ತಾರೀಖುಗಳಲ್ಲಿ ಬೇಕಾಗುತ್ತೆಂಬುವದನ್ನೂ ನಮೂದಿಸಬೇಕು.

3. ಇಂಥ "ಪಬ್ಲಿಕ್ ಅಕೌಂಟನ್ನು" ಪೋಸ್ಟಾಫೀಸಿನ ಸೇವಿಂಗ್ಸ್ ಬ್ಯಾಂಕುಗಳಲ್ಲಿಡಲು ಅಪೇಕ್ಷಿಪಡುವ ಸೊಸೈಟಿಗಳು ಈ ಆಫೀಸು ಮೂಲಕ ಪೋಸ್ಟ್ ಮಾಸ್ಟರ್ ಜನರಲ್ ರವರಿಗೆ ಅವಕ್ಕಾಗಿರುವ ನಮೂನೆಯಲ್ಲಿ ದರಖಾಸ್ತು ಬರೆದುಕೊಳ್ಳಬಹುದು.

4. ಈ ಪಬ್ಲಿಕ್ ಅಕೌಂಟಿನ ವಿಷಯವಾಗಿ ಇನ್ನೂ ವಿಶೇಷ ತಿಳಿಯಬೇಕಾದರೆ ಪೋಸ್ಟಲ್ ಗೈಡು (ಏಪ್ರಿಲ್ 1908ನೆ ಇಸವಿ) 194-195ನೆ ಪುಟಗಳನ್ನು ನೋಡಬೇಕು.

ಎಂ. ಶ್ಯಾಮರಾವ್,
ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್.

ಕೊಡಗು ಜೀಲ್ಲಾ ಕಮಿಷನರವರಿಂದ ಕೊಡೋಣಾದ

ಇಸ್ತಿಹಾರ್‌ನಾಮೆ.

ದರ್ಜಾಗ್ಹಾ, ಬಂಗಳೂರು, ತಾರೀಖು 7ನೆ ಜನವರಿ 1909ನೆ ಇಸವಿ.

ನಂ. 7. ಈ ಮೂಲಕವಾಗಿ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಸನ್ 1909ನೆ ಇಸವಿ ಏಪ್ರಿಲ್ ತಾರೀಖು 1ರ ಲಾಗಾಯಿತು 1910ನೆ ಇಸವಿ ಮಾರ್ಚಿ ತಾರೀಖು 31ರ ವರಿಗೆ ಕೊಡಗು ಸೀಮೆಯಲ್ಲಿ ಅಫೀಮನ್ನು, ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳನ್ನು ಮತ್ತು ಹೊಗೆ ತೆಗೆಯುವದಕ್ಕೋಸ್ಕರ ಉಪಯೋಗಿಸಲ್ಪಡುವ ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳಲ್ಲದ ಕಸಕಸೆಯಿಂದ ತಯಾರಾದ ನಿಷಾ ವಸ್ತುಗಳನ್ನು ಚಿಲ್ಲರೆಯಾಗಿ ಮಾರುವದಕ್ಕೆ ಸ್ವಾತಂತ್ರ್ಯವನ್ನು ಈ ಕೆಳಗೆ ಕಾಣಿಸಿರುವ ವ್ಯಾರಿಗೆ ಹರಾಜು ಮಾಡಲ್ಪಡುವದು.

(i) 1909ನೆ ಇಸವಿ ಮಾರ್ಚಿ 12ನೆ ತಾರೀಖಿನಲ್ಲಿ ಮಡಿಕೆರೆಯಲ್ಲಿ ಮಡಿಕೆರೆ ತಾಲ್ಲೂಕು ಸುಬೇದಾರರ ಮುಂದೆ.

(ii) 1909ನೆ ಇಸವಿ ಮಾರ್ಚಿ 3ನೆ ತಾರೀಖಿನಲ್ಲಿ ವೀರರಾಜಪ್ಯಾಟೆಯಲ್ಲಿ ಎಡಿನಾಲ್ಕು ನಾಡು ತಾಲ್ಲೂಕು ಸುಬೇದಾರರ ಮುಂದೆ.

(iii) 1909ನೆ ಇಸವಿ ಮಾರ್ಚಿ 7ನೆ ತಾರೀಖಿನಲ್ಲಿ ಗೋಣಿಕೊಪ್ಪಲ್ಲಲ್ಲಿ ಕಿಗ್ಗಟ್ಟುನಾಡು ತಾಲ್ಲೂಕು ಸುಬೇದಾರರ ಮುಂದೆ.

2. ವಿಕ್ರಯವು ಕೊಡಗು ಕಮಿಷನರವರ ಮಂಜೂರಾತಿಗೆ ಒಳಪಟ್ಟಿರುತ್ತದೆ. ಅವರು ಯಾವಕಾರಣವೂ ನಮೂದಿಸದೆ ಚಿಡದರಖಾಸ್ತುದಾರನಿಗೆ ಲೈಸೆನ್ಸನ್ನು ತಿರಸ್ಕರಿಸಬಹುದು. ಹೆಂಗಸಿಗೆ ಲೈಸೆನ್ಸು ಕೊಡಲ್ಪಡುವದಿಲ್ಲ.

3. ತಾನು ಮೊದಲೇ ದರಖಾಸ್ತು ಮಾಡಿದ ವೊಬಲಗನ್ನು ಕೊಟ್ಟಿದ್ದ ಪಕ್ಷದಲ್ಲಿ ಚೀಫ್ ಕಮಿಷನರವರಿಂದ ವಿಧಿಸೋಣಾದ ಫಾರಮಿನಲ್ಲಿ ಕಮಿಷನರವರಿಂದ ಮಂಜೂರಾದ ದರಖಾಸ್ತುದಾರನಿಗೆ ಲೈಸೆನ್ಸು ಕೊಡಲ್ಪಡುವದು.

4. ತೊಲ ಒಂದರ 4 ಆಣೆ ಪೇರೆ 80 ತೊಲದ ಸೇರಿಗೆ 20 ರೂಪಾಯಿ ವ್ಯಾರಿಗೆ ಕಮಿಷನರವರಿಂದ ಲೈಸೆನ್ಸುದಾರನಿಗೆ ಅಫೀಂ ಕೊಡಲ್ಪಡುತ್ತೆ.

5. ತೊಲ ಒಂದರ 9 ಆಣೆ ಪೇರೆ 80 ತೊಲದ ಸೇರಿಗೆ ಒಂದೇ ಬೆಲೆಯಾಗಿ 45 ರೂಪಾಯಿ ವ್ಯಾರಿಗೆ ಅಫೀಮನ್ನು ಲೈಸೆನ್ಸುದಾರನು ಜನಗಳಿಗೆ ಮಾರತಕ್ಕದ್ದು.

6. ಚಿಲ್ಲರೆಯಾಗಿ ಮಾರುವ ಅಂಗಡಿಗಳು ಮೂರೇ ಇರುವವು. ಅವು ಯಾವವಂದರೆ :—

ಮಡಿಕೇರಿಯಲ್ಲಿ ಒಂದು.
ವೀರರಾಜಪ್ಯಾಟೆಯಲ್ಲಿ ಒಂದು.
ಗೋಣಿಕೊಪ್ಪಲ್ಲಲ್ಲಿ ಒಂದು.

7. ಇನ್ನು ಹೆಚ್ಚಿಗೆ ಬೇಕಾಗುವ ತಪ್ಸೀಲುಗಳನ್ನು ಮಡಿಕೇರಿಯಲ್ಲಿ ಕೊಡಗು ಕಮಿಷನರವರಲ್ಲಿ ದರ್ಖಾಸ್ತು ಮಾಡಿ ತಿಳಿದುಕೊಳ್ಳಬಹುದು.

ಟಿ. ಬಿ. ಕೋಪ ಲ್ಯಾಂಡ್,
ಚೀಫ್ ಕಮಿಷನರವರ ಸೆಕ್ರಿಟರಿಯವರು.

ಮೈಸೂರು ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 18ನೆ ಜನವರಿ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

I. ಮೈಸೂರು ಡಿಸ್ಟ್ರಿಕ್ಟ್ ಟಿ. ನರಸೀಪುರ ತಾಲ್ಲೂಕು ಮುಡಕತೊರೆ ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರ ರಥೋತ್ಸವ ಕಾಲದಲ್ಲಿ ಮುಡಕತೊರೆಯಲ್ಲಿ 1908ನೆ ಇಸವಿ ಜನವರಿ 30ನೆ ತಾರೀಖು ಲಾಗಾಯಿತು 1909ನೆ ಇಸವಿ ಫೆಬ್ರವರಿ 5ನೆ ತಾರೀಖು ವರಿವಿಗೆ ದನಗಳ ಪ್ರದರ್ಶನವು ನಡೆಸಲ್ಪಡುತ್ತದೆ.

II. ಉತ್ತಮವಾದ ರಾಸುಗಳನ್ನು ತರತಕ್ಕವರಿಗೆ ಈ ಕೆಳಗೆ ನಮೂದಾಗುವ ಬಹುಮಾನಗಳು ದೊರೆಯುತ್ತವೆ :—

ಎ. ಕಾಸ್ ಎತ್ತುಗಳು ...	1ನೆ ಬಹುಮಾನ	...	20	ರೂಪಾಯಿಗಳು.	ಎ. ಕ್ಲಾಸಿಗೆ ಜುಮ್ಲಾ ರೂಪಾಯಿಗಳು 55.
	2ನೆ ಡಿಟೋ	...	15	ಡಿಟೋ	
	3ನೆ ಡಿಟೋ	...	10	ಡಿಟೋ	
	4ನೆ ಡಿಟೋ	...	10	ಡಿಟೋ	
ಬಿ. ಕ್ಲಾಸ್ ಜೀಜದ ಹೋರಿಗಳು.	1ನೆ ಡಿಟೋ	...	15	ಡಿಟೋ	ಬಿ. ಕ್ಲಾಸಿಗೆ ಜುಮ್ಲಾ ರೂಪಾಯಿಗಳು 25.
	2ನೆ ಡಿಟೋ	...	10	ಡಿಟೋ	
ಸಿ. ಕ್ಲಾಸ್ ಕರುಗಳು ...	ಪ್ರತಿಯೊಂದಕ್ಕೂ 5 ರೂಪಾಯಿನ ಮೇರೆ 4 ಬಹುಮಾನಗಳು.				ಸಿ. ಕ್ಲಾಸಿಗೆ ಜುಮ್ಲಾ ರೂಪಾಯಿಗಳು 20.
			ಜುಮ್ಲಾ	...	100

III. ಬಹುಮಾನಗಳ ತೀರ್ಮಾನವನ್ನು ಪರೀಕ್ಷಾಕರ್ತರಾದ ಪಂಚಾಯಿತರು ಮುಳ್ಳ ಒಂದು ಕಮಿಟಿಯವರು ಮಾಡುವರು. ಕಮಿಟಿಯವರ ತೀರ್ಮಾನವೇ ಆಖೈರು ತೀರ್ಮಾನವಾಗಿರುತ್ತಲ್ಲದೆ ಸದರೀ ತೀರ್ಮಾನಕ್ಕೆ ಅವರು ಕಾರಣಗಳನ್ನು ಕೊಡತಕ್ಕ ಅವಶ್ಯಕವಿರುವದಿಲ್ಲಾ.

IV. ಪ್ರದರ್ಶನ ನಡೆಯುವ ಸ್ಥಳದಲ್ಲಿ ದನಗಳಿಗೆ ಮೇವನ್ನು ನಗದು ಖರೀದಿಗೆ ಸರಬರಾಯಿ ಮಾಡಲು ಏರ್ಪಾಡು ಮಾಡಲ್ಪಡುತ್ತದೆ. ಆದರೆ ದನಗಳ ಮಾಲೀಕರು ಈ ವಿಚಾರದಲ್ಲಿ ಅವರ ಸ್ವಂತ ಏರ್ಪಾಡು ಮಾಡಿಕೊಂಡರೆ ತುಂಬಾ ಅನುಕೂಲವಾಗಿರುತ್ತೆ.

V. ರಾಸುಗಳನ್ನು ಪ್ರದರ್ಶನಕ್ಕೆ ಕಳುಹಿಸಲು ಇಷ್ಟ ಪಡುವವರು ಟಿ. ನರಸೀಪುರ ತಾಲ್ಲೂಕು ಅಮಲ್ದಾರ್ರವರಿಗೆ ರಾಸುಗಳ ತಪಶೀಲು ವಗೈರೆ ಸಮೂದಿಸಿ ಪ್ರದರ್ಶನ ಪುರುವಾಗುವದಕ್ಕೆ ಕಡೇಪಕ್ಷ ಎರಡು ದಿವಸಗಳ ಮುಂಚಿತವಾಗಿಯೇ ಅರ್ಜಿ ಮೂಲಕ ತಿಳಿಯಪಡಿಸಿಕೊಳ್ಳಬಹುದು.

VI. ಪ್ರದರ್ಶನಕ್ಕಾಗಿ ಚುನಾಯಿಸಿರುವ ಜಾಗವು ನೀರು ನೆರಳಿನಿಂದ ಅನುಕೂಲವಾಗಿರುವದಲ್ಲದೆ ಈ ಜಾತ್ರೆಗೆ ಮೈಸೂರು ಸೀಮೆಯ ಅನೇಕ ಸ್ಥಳಗಳಿಂದಲೂ ಬ್ರಿಟಿಷ್ ಸೀಮೆಯಿಂದಲೂ ಹೇರಳವಾಗಿ ಜನಗಳು ಬಂದು ಸೇರುವದರಿಂದ ದನಗಳ ವ್ಯಾಪಾರಕ್ಕೆ ವಿಶೇಷ ಅನುಕೂಲತೆಯುಳ್ಳದ್ದಾಗಿದೆ.

ಎಸ್. ಪಿ. ರಾಜಗೋಪಾಲಾಚಾರ್,
ಫಾರ್ ಡೆಪ್ಯುಟಿ ಕಮಿಷನರ್.